ಆ) ಮೈಸೂರಿನ ಜನತೆ ನೀರಿನ ಕೊರತೆ ಅನುಭವಿಸುತ್ತಿರುವುದರಿಂದ ಅದನ್ನು ತಪ್ಪಿಸುವ ಬಗ್ಗೆ ಕೆಂ.ಡಬ್ಲ್ಯೂ ಎಸ್. ಸಹಯೋಗದೊಂದಿಗೆ ಸೂಕ್ತ ಯೋಜನೆಯನ್ನೇನಾದರೂ ರೂಪಿಸಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಆ) ವಿಷಯವನ್ನು ಪರಿಶೀಲಿಸಿದಲ್ಲಿ ಪ್ರಶ್ನೆಯು ಮೈಸೂರು ನಗರಕ್ಕೆ ಸಂಬಂಧಿಸಿದ್ದೆಂದು ಭಾವಿಸಲಾಗಿದೆ. ಮೈಸೂರು ನಗರದಲ್ಲಿ ಸ್ಥಾಪಿತವಾಗಿರುವ ಕೈಗಾರಿಕೆ ಪ್ರದೇಶಗಳಿಗೆ ಈಗ ಅಗತ್ಯವಿರುವ ನೀರಿನ ಸರಬರಾಜು ಪ್ರಮಾಣ 2.5 ಮೀ. ಗ್ಯಾಲನ್ (ದಿನವಹಿ ಮುಂದೆ ಸ್ಥಾಪಿತವಾಗುವ ಕೈಗಾರಿಕೆಗಳಿಗೂ ಸ್ಥಾಪನೆಯ ವಿವಿಧ ಹಂತದಲ್ಲಿರುವ ಕೈಗಾರಿಕೆಗಳು ಹೆಚ್ಚುವರಿ ಅಗತ್ಯವಿರುವ ನೀರಿನ ಪ್ರಮಾಣ(ದಿನವಹಿ) ಮೈಸೂರಿನ ಕೈಗಾರಿಕಾ ವಲಯದಲ್ಲಿ ಸ್ಥಾಪಿತವಾಗಿರುವ ಕೈಗಾರಿಕೆಗಳಿಂದ ಲಭಿಸಿರುವ ಉದ್ಯೋಗ ಅವಕಾಶ ವಿವರ ಈ ಕೆಳಕಂಡಂತಿದೆ.

1)	ಕೈಗಾರಿಕಾ ಘಟಕಗಳ ವಿಸ್ತರಣಾ ಕಾರ್ಯಕ್ರಮದಿಂದ ಹೆಚ್ಚಾಗಿರುವ ಕಾರ್ಮಿಕರ ಸಂಖ್ಯೆ	583
2)	ಹೊಸ ಘಟಕಗಳಿಂದ ಇದುವರೆಗೂ ಉದ್ಯೋಗವಕಾಶ ಕಲ್ಪಿಸಿರುವ ಸಂಖ್ಯೆ	1259

ಮೇಲಿನ ಕೈಗಾರಿಕಾ ಕ್ಷೇತ್ರಗಳಲ್ಲಿ ಇನ್ನು ಹಲವಾರು ಘಟಕಗಳ ಸ್ಥಾಪನೆ ವಿವಿಧ ಹಂತದಲ್ಲಿರುವುದರಿಂದ ಸುಮಾರು 5 ಸಾವಿರ ಕಾರ್ಮಿಕರಿಗೆ ಕೆಲಸಗಳು ಲಭ್ಯವಾಗುವ ಸಾಧ್ಯತೆಗಳಿವೆ. ಸಣ್ಣ ಕೈಗಾರಿಕಾ ವಲಯದಲ್ಲಿ 94-95,95-96 (ಜುಲೈ 95ರವರೆಗೆ)ರ ಸಾಲಿನಲ್ಲಿ 3109 ಉದ್ಯೋಗಾವಕಾಶ ಕಲ್ಪಿತವಾಗಿದೆ.

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೈಗಾರಿಕಾ ಪ್ರದೇಶಕ್ಕೆ ಬೇಕಾಗುವ ನೀರನ್ನು ಮಾತ್ರ ಸರಬರಾಜು ಮಾಡಲು ವ್ಯವಸ್ಥೆ ಮಾಡಲಾಗುತ್ತಿದೆ. ಮೈಸೂರಿನ ಜನತೆಗೆ ನೀರಿನ ಸರಬರಾಜು ಮಾಡುವುದು ಮಂಡಳಿಯ ಕಾರ್ಯವ್ಯಾಪ್ತಿಗೆ ಬರುವುದಿಲ್ಲ.

ಮೈಸೂರು ನಗರವನ್ನು ಬೃಹತ್ ಕೈಗಾರಿಕಾ ನಗರವನ್ನಾಗಿ ಮಾಡುವುದು

154 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಮೈಸೂರು ನಗರವನ್ನು ಬೃಹತ್ ಕೈಗಾರಿಕಾ ನಗರವನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರದವರ ಮುಂದಿದೆಯೇ ಹಾಗಿದ್ದಲ್ಲಿ ಈ ಯೋಜನೆಯ ವಿವರಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಈಗಾಗಲೇ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು ಮೈಸೂರು ನಗರದ ಬಳಿ ಸುಮಾರು 3500-00 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ, ಬೆಳಗೊಳ ಇತ್ಯಾದಿ ಪ್ರದೇಶಗಳಲ್ಲಿ ಕೈಗಾರಿಕಾ ವಲಯಗಳನ್ನು ಕೈಗಾರಿಕಾ ಅಭಿವೃದ್ಧಿಗೆ ಬೇಕಾಗುವ ಮೂಲಭೂತ ಸೌಕರ್ಯಗಳೊಂದಿಗೆ ಸ್ಥಾಪಿಸಿದೆ.

ರಾಜ್ಯದಲ್ಲಿ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ

155 - ಶ್ರೀ ಕೆ.ಎಸ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ, ತಂತ್ರಜ್ಞಾನ, ಪರಿಸರ, ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಈ ಸಾಲಿಗೆ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರದವರು ಶಿಫಾರಸ್ಸು ಮಾಡಿರುವರು?*

ಆ) *ಈ ಪೈಕಿ ಕರ್ನಾಟಕ ರಾಜ್ಯದವರು ಎಷ್ಟು ಜನ ಹಾಗೂ ಇತರ ರಾಜ್ಯಕ್ಕೆ ಸೇರಿದವರು ಎಷ್ಟು ಜನ?*

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ತಂತ್ರಜ್ಞಾನ, ಪರಿಸರ, ಮತ್ತು ಜೀವ ಪರಿಸ್ಥಿತಿ ಶಾಸ್ತ್ರ ರಾಜ್ಯ ಸಚಿವರು) :

ಅ) 11 (ಹನ್ನೊಂದು) ಹೊಸ ಸಕ್ಕರೆ ಕಾರ್ಖಾನೆಗಳು

ಆ) ಹೊರ ರಾಜ್ಯಕ್ಕೆ ಸೇರಿದವರು ಯಾರು ಇರುವುದಿಲ್ಲ

ಬೆಂಗಳೂರು ರಾಜಾಜಿನಗರದ ಕೈಗಾರಿಕಾ ವಸಹಾತುವಿನ ಬಗ್ಗೆ

156 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ರಾಜಾಜಿನಗರದ ಕೈಗಾರಿಕಾ ವಸಾಹತುವಿನಲ್ಲಿರುವ ಎ-88 ಮಳಿಗೆಯನ್ನು ಯಾರು ಯಾರಿಗೆ ಮಂಜೂರಾಗಿರುತ್ತದೆ. ಮತ್ತು ಮಾರಾಟವಾಗಿದೆಯೇ (ವಿವರಗಳನ್ನೊದಗಿಸುವುದು)*

ಆ) *ಮಾರಾಟದ ಬೆಲೆ ಎಷ್ಟು?*

ಇ) *ಕೈಗಾರಿಕೆಯವರಿಂದ ಪಡೆದ ಹಣವೆಷ್ಟು ಇಂದಿನ ಮಾರುಕಟ್ಟೆಯ ಬೆಲೆಗೆ ಅನುಗುಣವಾಗಿದೆಯೇ?*

ಶ್ರೀ ಎನ್.ಎಂ. ನಬೀ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಬೆಂಗಳೂರು ರಾಜಾಜಿನಗರ ಕೈಗಾರಿಕಾ ವಸಾಹತುವಿನಲ್ಲಿ ಎ-88 ಸಂಖ್ಯೆಯ ಮಳಿಗೆಯು ಇರುವುದಿಲ್ಲ.